

ಹೋಗುವ ಚಡಪಡಿಕೆಯಲ್ಲಿ ಎಲ್ಲರೂ ಇದ್ದರು. ಕರಾವಳಿಯವರೇ ತುಂಬಿಕೊಂಡಿದ್ದ ಆಫೀಸಿನಲ್ಲಿ, ಊರು ಎಂಬ ಪದವನ್ನು ಮಂಗಳೂರು ಅಥವಾ ದಕ್ಷಿಣ ಕನ್ನಡ ಎಂಬುದಕ್ಕೆ ಪರ್ಯಾಯವಾಗಿಯೇ ಬಳಸುತ್ತಿದ್ದರು. 'ದಾನೆ, ಊರ್ಗು ಪೋಪರಾ?', 'ಬಸ್ಸು ಏಪ?' 'ಯಾನ್ ಎಲ್ಲೆ ಕಾಂಡೆ ಊರ್ಗು ಪೋಂದುಲ್ಲೆ', 'ಆ ಬೋಸುಡಿ ರಜೆ ಕೊಡಲ್ಲ ಮಾರ್ರೆ, ಎಂತ ಸಾವ ಏನ' ಮೊದಲಾದ ಗಲಾಟೆಯೇ ಹೆಚ್ಚಾಗಿ ಅನಂತುವಿಗೆ ತಲೆ ಚಿಟ್ಟುಹಿಡಿದಂತಾಯ್ತು! ಇವನ ಪಕ್ಕ ಕೂರುವ, ತುಳು ಬರದ ಸತೀಶ ಪರಾಡ್ಕರನು, 'ಏನು, ಊರಿಗೆ ಹೊರಟದ್ದಾ ಹೇಗೆ?' ಎಂದಾಗ 'ನನಗೆಂತ ಊರು ಮಾರಾಯ, ನನ್ನದು ಬೆಂಗಳೂರೇ' ಎಂದು ನುಣುಚಿಕೊಂಡವನು ಕೆಲಸದಲ್ಲಿ ಮುಳುಗಿದ. ಊಟದ ಹೊತ್ತಿನಲ್ಲಿ ಟಿಫಿನ್ ಡಬ್ಬಿ ತೆಗೆದಾಗ, ಆಚೆ ಮೂಲೆಯಲ್ಲಿದ್ದ ಐತಾಳ್ ಮೇಡಂ, 'ಹೊಯ್ ಅನಂತ, ಎಂತ ಮೂಲಂಗಿ ಹುಳಿಯಾ! ಪರಿಮ್ಮಳ ಪರಿಮ್ಮಳ, ಒಳ್ಳೆ ಬೀಬೀಎಂಪೀ ಮೋರಿ ತೆಗೆದ ಹಾಗೆ' ಎಂದು ಹೇಳಿ ಪಕಪಕ ನಕ್ಕಾಗಲೂ ಅವನಿಗೆ ನಗಬೇಕೆನಿಸಲಿಲ್ಲ. ಬದಲಿಗೆ ಇನ್ನು ತಾನು ಮೊದಲಿನಂತೆ ಲವಲವಿಕೆಯಿಂದ ಇರಲು ಸಾಧ್ಯವೇ ಇಲ್ಲವೇನೋ ಎಂದು ದುಗುಡವಾಯಿತು. ಕೊಂಚ ಹೊತ್ತು ಬಾಲ್ಕನಿಯಲ್ಲಿ ನಿಲ್ಲಲು ಹೋದವನಿಗೆ ಅಲ್ಲಿಯೂ ಸಮಾಧಾನವಾಗದೇ ಸಂಜೆ ಮನೆಗೆ ಬೇಗ ಹೊರಟ.

ಶನಿವಾರ ಸಂಜೆ ಅನಂತು ಊರಿಗೆ ಹೊರಟು ನಿಂತ. ಪ್ರಯಾಣದುದ್ದಕ್ಕೂ ಮನಸ್ಸಿನಲ್ಲಾಗುತ್ತಿದ್ದ ತುಮುಲಕ್ಕೆ ನಿದ್ದೆ ಹತ್ತದೇ, ಊರು ಹತ್ತಿರವಾಗುತ್ತಿದ್ದಂತೆ ವಿಚಿತ್ರ ದಿಗಿಲಾಗುತ್ತಿತ್ತು. ಇಷ್ಟೆಲ್ಲ ವರ್ಷ ಊರಿನ ಬಗ್ಗೆ ಏನೆಲ್ಲಾ ಯೋಚಿಸಿ, ಕಲ್ಪಿಸಿಕೊಂಡಿದ್ದ ತನಗೆ, ಆ ಕಲ್ಪನೆಗಳ ಮೂಲಾಧಾರವಾದ ಜಾಗೆಯನ್ನು ನೋಡಲು ಯಾಕೆ ಆತಂಕವಾಗುತ್ತಿದೆ ಎಂಬ ಬೆರಗಿನಲ್ಲೇ ಜೊಂಪು ಹತ್ತಿತು. ನಿದ್ರೆ ಮತ್ತು ಎಚ್ಚರದ ನಡುವಿನ ವಿಭ್ರಾಂತ ಸ್ಥಿತಿಯಲ್ಲಿ ಮುಂಜಾವಿನ ಐದು ಗಂಟೆ ಸುಮಾರಿಗೆ ಬಸ್ಸಿಳಿದವನಿಗೆ ಎಲ್ಲ ಕನಸಿನಂತೆ ಅನಿಸತೊಡಗಿ, ಎಷ್ಟು ಬಾಚಿಕೊಂಡರೂ ಮುಗಿಯದ ನೆನಪುಗಳ ಗುಡ್ಡೆಯೆದುರು ನಿಂತಂತಾಯಿತು! ಆ ಹೊತ್ತಿಗಾಗಲೇ ನಿದ್ರೆಯಿಂದೇಳುತ್ತಿದ್ದ ಊರಿನ ಅವೇ ಪರಿಚಿತ ರಸ್ತೆಗಳಲ್ಲಿ ನಡೆಯುವಾಗ ಎದುರು ಸಿಕ್ಕವರೆಲ್ಲಾ ತನ್ನನ್ನೇ ನೋಡುತ್ತಿದ್ದಾರೆಂದು ಅನಿಸುತ್ತಿತ್ತು. ಅವರಿಗೆಲ್ಲ ಒಂದೋ ತನ್ನ ಗುರುತು ಹತ್ತಿದೆ, ಇಲ್ಲವೇ ನಾನು ಇಲ್ಲಿನವನಲ್ಲವೆಂದು ಗೊತ್ತಾಗಿದೆ ಎಂದೆಲ್ಲ ಅನ್ನಿಸಿ ವಿಪರೀತ ಮುಜುಗರವಾಗತೊಡಗಿತು. ಆದಷ್ಟು ಬೇಗ ಮನೆಯಿದ್ದ ಜಾಗೆಯನ್ನು ನೋಡಿ ಹೊರಟು ಬಿಡಬೇಕೆಂದುಕೊಂಡರೂ ಊರಿನ ಒಂದೊಂದೂ ಮೂಲೆಯೆಡೆಗೂ ಮನಸ್ಸು ಹರಿಯುತ್ತಿತ್ತು! ಮಳೆಗೆ ಒದ್ದೆಯಾಗಿದ್ದ ಕಡುಗಪ್ಪಿನ ಟಾರು ರಸ್ತೆಯ ಇಕ್ಕೆಲಗಳಲ್ಲಿ ಅವನು ಅಲ್ಲಿದ್ದ ಕಾಲದ ಏನೇನೋ ವಿವರಗಳು ಹರಡಿ ಕೊಂಡಿರುವಂತೆನಿಸುತ್ತಿತ್ತು. ಊರಿನ ಮೂಲ ವಿನ್ಯಾಸ ಹಾಗೇ ಇತ್ತಾದರೂ, ಅದಕ್ಕೆ ಹೊಸ ಹೊಸ ವಿವರಗಳೆಲ್ಲ ಸೇರಿಕೊಂಡಿರುವುದರಿಂದ, ತಾನು ಬೇರೆಯದೇ ಜಾಗೆಯಲ್ಲಿದ್ದೇನಾ ಎಂಬ ಗೊಂದಲವಾಯಿತು ಅನಂತುವಿಗೆ. ಪುರಸಭೆಯ ಮೈದಾನದ ಹಿಂದಿನ ರಸ್ತೆಯಲ್ಲಿದ್ದ ನೀರಿನ ಟ್ಯಾಂಕಿನಿಂದ ಜೇಸೀ ಹಾಲಿನ ನಡುವೆ ಒಂದು ಕಾಲದಲ್ಲಿ ದೂರ ದೂರ ಒಂದೆರಡು ಮನೆಗಳಿದ್ದ ಬಯಲಿನಂಥ ಪ್ರದೇಶದ ತುಂಬಾ ಬಣ್ಣ ಬಣ್ಣದ ಚಿಕ್ಕ ದೊಡ್ಡ ಮನೆಗಳು ಕಿಕ್ಕಿರಿದಿದ್ದುವು. ಅಮ್ಮನ ಶಾಲೆ ಹಿಂದಿದ್ದ ಅಡಿಗರ ಮನೆಯ ಪಕ್ಕ ದಾಸಯ್ಯ ಮತ್ತು ಅವನ ಹೆಂಡತಿ ವಾಸವಿದ್ದ ಪುಟ್ಟ ಗೂಡಿನಂಥ ಮನೆಯಿದ್ದಲ್ಲಿ ಈಗ ಎರಡಂತಸ್ತಿನ ಮನೆಯೊಂದು ನಿಂತಿತ್ತು. ಎದುರಿಗಿದ್ದ ಶಾಲೆಯ ಸುತ್ತಲೂ ಎದ್ದಿದ್ದ ಎರಡಾಳೆತ್ತರದ ಗೋಡೆಯ ಮೇಲೆ ಉದ್ದನೆಯ ಕೆಂಪು ಪೆನ್ಸಿಲ್ಲಿನ ಮೇಲೆ ಸವಾರಿ ಮಾಡುತ್ತಿದ್ದ ಇಬ್ಬರು ಪುಟ್ಟ ಮಕ್ಕಳ ಚಿತ್ರ ಬಿಡಿಸಲಾಗಿತ್ತು. ಆ ಮಕ್ಕಳ ಕಣ್ಣುಗಳ ಭಾಗದ ಬಣ್ಣವನ್ನು ಯಾರೋ ಕೆತ್ತಿಬಿಟ್ಟು, ಅವು ಕಣ್ಣು ಕಿತ್ತ ಗೊಂಬೆಗಳಂತೆ ಕಂಡು ಅನಂತುವಿಗೆ ದಿಗಿಲಾಯ್ತು. ಇನ್ನೂ ನೂರು ಮೀಟರಿನಷ್ಟು ಮುಂದೆ ಸಾಗಿ ಅಲ್ಲಿ ಕಾಣುತ್ತಿರುವ ಸೋಡಿಯಂ ಲೈಟು ಕಂಬದ ಪಕ್ಕ ಎಡಕ್ಕೆ ತಿರುಗಿದರೆ ಅಲ್ಲಿ ತನ್ನ ಮನೆಯಿದೆ ಎಂದುಕೊಂಡ ಮರುಕ್ಷಣವೇ, ಅಲ್ಲಿ ಮನೆಯಿಲ್ಲವೆಂಬ ಆ ಕ್ಷಣದ ವಾಸ್ತವದ ಅರಿವಾಗಿ ಗಕ್ಕನೆ ನಿಂತು ಬಿಟ್ಟ. ಎದುರು ಆಕಾಶದಂಚಿನಲ್ಲಿ ಮೆಲ್ಲನೆ ಮೂಡುತ್ತಿದ್ದ ಗುಲಾಬಿ ಬಣ್ಣದ ಬೆಳಕಿನ ಪ್ರಭೆಯನ್ನೇ ದಿಟ್ಟಿಸುತ್ತ ನಿಂತ.

ಮನಸ್ಸಿನಲ್ಲಿ ಉಳಿದುಬಿಟ್ಟಿರುವ ಮನೆಯ ಚಿತ್ರ ಕಣ್ಣೆದುರು ಮೂಡಿದಂತಾಗಿ ಅನಂತುವಿಗೆ ಒಂದು ಹೆಜ್ಜೆಯೂ ಮುಂದಿಡಲು ಆಗಲಿಲ್ಲ. ಆಗಿದ್ದಾಗಲಿ ಎಂದುಕೊಂಡು ಮನೆಯಿದ್ದ ಜಾಗದಲ್ಲಿ ಈಗೇನಿದೆ ಎಂದು ನೋಡಿಬಿಟ್ಟರೆ, ಇಷ್ಟು ಕಾಲದಿಂದ ತನ್ನೊಳಗೆ ಬೆಚ್ಚಗಿದ್ದ ಊರು, ಮನೆಯ ಚಿತ್ರಗಳೆಲ್ಲ ಅಳಿಸಿಹೋಗಿ ತಾನು ಖಾಲಿಯಾಗಿ ಬಿಡುತ್ತೇನೆ ಎಂದು ಭಯವಾಯಿತು. ಆ ತಿರುವಿನಾಚೆ ಏನು ಕಾದಿದೆಯೋ ಯಾರಿಗೆ ಗೊತ್ತು? ಅಲ್ಲಿ ಕಂಡು ಬಿಡುವ ಅಥವಾ ಕಾಣದೇ ಹೋಗುವ ಯಾವುದೋ ಸಂಗತಿಯಿಂದ ತನ್ನ ಇಡೀ ಭಾವಲೋಕವೇ ನಾಶವಾದೀತು ಎನಿಸಿತು. ಇಲ್ಲಿಯವರೆಗೆ ಬದುಕಿನ ಪ್ರಯಾಣದುದ್ದಕ್ಕೂ ಬೆಚ್ಚಗೆ ಜತೆಗಿದ್ದ ಮನೆಯೆಂಬ ಭಾವಕ್ಕೆ ಸ್ವಲ್ಪವೇ ಧಕ್ಕೆಯಾದರೂ ತಾನು ಇನ್ನೆಂದಿಗೂ ನೆಮ್ಮದಿಯಾಗಿರಲಾರ ಎನಿಸಿತು. ಅತ್ಯಂತ ಖಾಸಗೀ ಲೋಕವೊಂದನ್ನು ಹೀಗೆ ವಾಸ್ತವದ ಬೀದಿಗೆಳೆದು ತರಲು ಹೊರಟಿದ್ದ ತನ್ನ ಬಗ್ಗೆಯೇ ರೇಜಿಗೆಯೆನಿಸಿತು. ಇಲ್ಲ! ತನಗಿದು ಸಾಧ್ಯವಿಲ್ಲ. ಮುಂದಿನ ತಿರುವಿನಲ್ಲಿ ತನ್ನ ಮನೆ, ಮನೆಯೆದುರಿನ ನಾಗಸಂಪಿಗೆ ಮರ, ಕಾರು ಮತ್ತು ಅವುಗಳ ನಡುವಿನ ದಿವ್ಯ ಏಕಾಂತವಿನ್ನೂ ಹಾಗೆ ಇವೆ ಮತ್ತು ಇರಬೇಕು. ಇಷ್ಟು ಕಾಲ ಕಾಣದೆಯೂ ಜೀವಂತವಾಗಿದ್ದ ಮನೆಯೆಂಬ ಭಾವವನ್ನು, ಹಾಗೇ ಉಳಿಸಿಕೊಳ್ಳಬೇಕು. ತನ್ನೊಳಗಿನ ಊರು, ಊರಿನ ಮನೆ ಮತ್ತು ಅಲ್ಲಿನ ಮೌನ ಹಾಗೇ ಉಳಿಯಬೇಕಿದ್ದರೆ, ತಾನು ಅಲ್ಲಿಂದ ಹೊರಡಬೇಕು ಎಂಬ ಯೋಚನೆ ಹೆಪ್ಪುಗಟ್ಟತೊಡಗಿ, ಲೈಟು ಕಂಬಕ್ಕೆ ಬೆನ್ನು ಹಾಕಿ ನಡೆಯತೊಡಗಿದ. ಓಡು ನಡಿಗೆಯಲ್ಲೇ ಮರಳಿ ಹೊರಟವನಿಗೆ, ಊರಿಗೂರೇ ಹಿಂದೆ ಓಡಿ ಬರುತ್ತಿರುವಂತೆ, ತಾನಿಲ್ಲದಿದ್ದ ಇಷ್ಟು ವರ್ಷಗಳಲ್ಲಿ ತನಗೆ ಸಂಬಂಧಿಸಿದ ಯಾವ ಸಂಗತಿಗಳು ಬದಲಾಗಿಯೋ, ಇನ್ನಿಲ್ಲವಾಗಿಯೋ ಮರೆಯಾಗಿ ಹೋಗಿವೆ ಎಂಬುದನ್ನು ತನಗೆ ತಿಳಿಸಲು, ಈವರೆಗೆ ತನ್ನನ್ನು ಪೊರೆದ, ಪೊರೆಯುತ್ತಿರುವ ತನ್ನೊಳಗಿನ ಮೌನವನ್ನು ಬರಿದುಮಾಡಿ, ಆ ಜಾಗೆಯಲ್ಲಿ, ಅನಾಥ ನಿರ್ವಾತವನ್ನೂ, ಬದಲಾದ ಊರಿನ ಕರ್ಕಶಗಳನ್ನು ತುಂಬಲು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದೆ ಎನಿಸಿ ಓಡತೊಡಗಿದ, ಓಡುತ್ತಲೇ ಬಸ್ ಸ್ಟಾಪು ತಲುಪಿ ಸಿಕ್ಕ ಬಸ್ಸು ಹತ್ತಿ ಕಿಟಕಿ ಮುಚ್ಚಿ ಕುಳಿತುಬಿಟ್ಟ. ಬಸ್ಸು ಚಲಿಸಿದಂತೆ ಸಾವರಿಸಿಕೊಂಡು ಕೂತಲ್ಲೇ ಹಿಂದುರಿಗಿ ನೋಡಿದ. ಹಗಲಾದರೂ ಇನ್ನೂ ಉರಿಯುತ್ತಿದ್ದ ಸೋಡಿಯಂ ಲೈಟಿನ ಕಡು ಹಳದಿ ಬಣ್ಣದ ಎರಡು ಪ್ರಕಾಶಮಾನ ಬಿಂದುಗಳು ತುಸುವೇ ಅಲುಗಾಡುತ್ತಾ ದೂರವಾಗುತ್ತಿದ್ದುವು.